ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/20/ಇಎಸ್‌ಟಿ(1)ಎ/2018-19/553

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 18.06.2019

**ಸುತ್ತೋಲೆ**

**ವಿಷಯ :** ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 2368/2011 – ಶ್ರೀ ಬಿ.ಕೆ. ಪವಿತ್ರ ಪ್ರಕರಣದಂತೆ ಹಿಂಬಡ್ತಿ ಹೊಂದಿ ಹಿಂದಿನ ಹುದ್ದೆಗೆ ಮರುಸ್ಥಳನಿಯುಕ್ತಿ ಹೊಂದಿರುವ ಅಧಿಕಾರಿಗಳ ವೇತನ ಪಾವತಿ ಕುರಿತು.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 098 ಟಿಪಿಇ 2018, ದಿ: 17.04.2018.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 27.02.2019
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 98 ಟಿಪಿಇ 2018, ದಿ: 01.03.2019.
4. ಸರ್ಕಾರದ ತಿದ್ದುಪಡಿ ಸಂಖ್ಯೆ: ಇಡಿ 98 ಟಿಪಿಇ 2018, ದಿ: 02.03.2019.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 05.03.2019.
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 15.05.2019.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 98 ಟಿಪಿಇ 2018, ದಿ: 06.06.2019.
8. ಮಹಾಲೇಖಪಾಲರ ಕಛೇರಿ ಪತ್ರ ಸಂಖ್ಯೆ: ಜಿಇ11/ಬಿಕೆಪಿ/2019-20/319, ದಿನಾಂಕ: 03.06.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 2368/2011 – ಶ್ರೀ ಬಿ.ಕೆ. ಪವಿತ್ರ ಪ್ರಕರಣದಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಸೇನೆನಿ 2011, ದಿನಾಂಕ: 06.05.2017 ರಲ್ಲಿನ ಮಾರ್ಗಸೂಚಿಗಳನ್ವಯ ಪರಿಷ್ಕರಿಸಲಾದ ಜೇಷ್ಠತಾ ಪಟ್ಟಿಯನುಸಾರ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಗ್ರೂಪ್-ಎ ಸಮೂಹದ ಪ್ರಾಂಶುಪಾಲರು ಗ್ರೇಡ್-2, ಪ್ರಾಂಶುಪಾಲರು ಗ್ರೇಡ್-1, ಆಡಳಿತಾಧಿಕಾರಿ ಮತ್ತು ಸಹಾಯಕ ಆಡಳಿತಾಧಿಕಾರಿ ವೃಂದದಲ್ಲಿ ಹಿಂಬಡ್ತಿ ಮತ್ತು ಮುಂಬಡ್ತಿಯನ್ನು ಉಲ್ಲೇಖ(1) ರ ಸರ್ಕಾರದ ಅಧಿಸೂಚನೆಯಲ್ಲಿ ಹೊರಡಿಸಲಾಗಿತ್ತು.

ಉಲ್ಲೇಖ(2) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ರನ್ವಯ, ಪ್ರಸ್ತುತ ಹಿಂಬಡ್ತಿಗೊಳಗಾದ ಅಧಿಕಾರಿ / ನೌಕರರನ್ನು, ಅವರು ಹಿಂಬಡ್ತಿ ಹೊಂದಿದ ನಿಕಟಪೂರ್ವದಲ್ಲಿ ಧಾರಣ ಮಾಡಿದ್ದ ವೃಂದಕ್ಕೆ, ಹಿಂಬಡ್ತಿ ಹೊಂದಿದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ, ಮರುನಿಯುಕ್ತಿಗೊಳಿಸತಕ್ಕದ್ದು. ಅವರು ಕೆಳಹಂತದ ವೃಂದಗಳಿಗೆ ಹಿಂಬಡ್ತಿಗೊಳ್ಳುವ ಪೂರ್ವದ ವೃಂದದ ವೇತನ ಶ್ರೇಣಿಯಲ್ಲಿ ಮತ್ತು ವೇತನದ ಅದೇ ಹಂತದಲ್ಲಿ ಅವರು ವೇತನವನ್ನು ಪಡೆಯುವುದನ್ನು ಮುಂದುವರೆಸತಕ್ಕದ್ದು ಎಂದು ಸೂಚಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಗ್ರೂಪ್-ಎ ವೃಂದಗಳಲ್ಲಿ ಹಿಂಬಡ್ತಿ ಹೊಂದಿದ ಅಧಿಕಾರಿಗಳಿಗೆ ಅವರು ಈ ಹಿಂದೆ ಧಾರಣ ಮಾಡಿದ ವೃಂದಗಳಿಗೆ ಹಿಂಬಡ್ತಿ ಹೊಂದಿದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮರುಸ್ಥಳನಿಯುಕ್ತಿ ಆದೇಶವನ್ನು ಉಲ್ಲೇಖ(3) ಮತ್ತು (4) ರ ಸರ್ಕಾರದ ಆದೇಶದಲ್ಲಿ ಹೊರಡಿಸಲಾಗಿತ್ತು.

...2/-

ಏತನ್ಮಧ್ಯೆ ಉಲ್ಲೇಖ(5) ರ ಸರ್ಕಾರದ ಆದೇಶದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 27.02.2019 ಕ್ಕೆ ತಡೆಯಾಜ್ಞೆ ನೀಡಿರುವುದರಿಂದ, ಈ ಬಗ್ಗೆ ಸರ್ಕಾರದಿಂದ ಮುಂದಿನ ನಿರ್ದೇಶನ ನೀಡುವವರೆಗೆ ಸದರಿ ಆದೇಶದ ಅನುಷ್ಠಾನಕ್ಕೆ ಯಾವುದೇ ಮುಂದಿನ ಕ್ರಮಕೈಗೊಳ್ಳತಕ್ಕದ್ದಲ್ಲ ಎಂದು ತಿಳಿಸಲಾಗಿತ್ತು.

ಉಲ್ಲೇಖ(6) ರ ಸರ್ಕಾರದ ಆದೇಶದಲ್ಲಿ, ದಿನಾಂಕ: 27.02.2019 ರ ಸರ್ಕಾರದ ಆದೇಶದಂತೆ ಮುಂದಿನ ಕ್ರಮಕೈಗೊಳ್ಳಲು ಸೂಚಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಉಲ್ಲೇಖ(7) ರ ಸರ್ಕಾರದ ಅಧಿಸೂಚನೆಯಲ್ಲಿ, ದಿನಾಂಕ: 01.03.2019 ರ ಸರ್ಕಾರದ ಅಧಿಸೂಚನೆಯನ್ನು ಜಾರಿ ಮಾಡಲಾಗಿದೆ.

ಆದಕಾರಣ ಬಿ.ಕೆ. ಪವಿತ್ರ ಪ್ರಕರಣದಂತೆ ಹಿಂಬಡ್ತಿ ಹೊಂದಿ ಮರುಸ್ಥಳನಿಯುಕ್ತಿ ಹೊಂದಿರುವ ಅಧಿಕಾರಿಗಳ ಪರಿಷ್ಕೃತ ವೇತನ ಪಟ್ಟಿಯನ್ನು ವಿತರಿಸುವ ಸಂಬಂಧ ಸದರಿ ಅಧಿಕಾರಿಗಳ ಸೇವಾಪುಸ್ತಕ, ಮಂಜೂರಾದ ವಾರ್ಷಿಕ ವೇತನ ಬಡ್ತಿ, ಅಂತಿಮ ವೇತನ ಪ್ರಮಾಣ ಪತ್ರ, ಕಾರ್ಯವರದಿ, ರಜಾ ವಿವರ ಇತ್ಯಾದಿಗಳ ಮಾಹಿತಿಯನ್ನು ಮುಂದಿನ ಕ್ರಮಕ್ಕಾಗಿ ಮಹಾಲೇಖಪಾಲರ ಕಛೇರಿಗೆ ಸಲ್ಲಿಸಲು ಉಲ್ಲೇಖ(8) ರ ಮಹಾಲೇಖಪಾಲರ ಪತ್ರದಲ್ಲಿ ಕೋರಲಾಗಿದೆ(**ಪ್ರತಿ ಲಗತ್ತಿಸಿದೆ**). ತತ್ಸಂಬಂಧ ಮಹಾಲೇಖಪಾಲರ ಪತ್ರದಲ್ಲಿ ಕೋರಿರುವಂತೆ ಮಾಹಿತಿ / ದಾಖಲೆಗಳನ್ನು ಮಹಾಲೇಖಪಾಲರ ಕಛೇರಿಗೆ **ಜರೂರು** ಸಲ್ಲಿಸಿ, ಪ್ರತಿಯನ್ನು ಮಾಹಿತಿಗಾಗಿ ಇಲಾಖೆಗೆ ಸಲ್ಲಿಸಲು ಕೋರಿದೆ.

**ಆಡಳಿತಾಧಿಕಾರಿ**
**ತಾಂತ್ರಿಕ ಶಿಕ್ಷಣ ಇಲಾಖೆ,**
**ಬೆಂಗಳೂರು**

**ಇವರಿಗೆ:–**

ತಾಂತ್ರಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಎಲ್ಲಾ ಪ್ರಾಂಶುಪಾಲರು / ಅಧಿಕಾರಿಗಳಿಗೆ.

**ಪ್ರತಿ:–**

1. ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ–1, ಲೆಕ್ಕಪರಿಶೋಧನೆ–2), ಕರ್ನಾಟಕ, ಬೆಂಗಳೂರು;
2. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು;
3. ಇ–ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು;
4. ನಿರ್ದೇಶಕರ ಆಪ್ತ ಶಾಖೆಗೆ;
5. ಕಛೇರಿ ಪ್ರತಿ.

प्रधान महालेखाकार का कार्यालय (ले.व.ह.). कर्नाटका, बेंगलूर
OFFICE OF THE PRINCIPAL ACCOUNTANT GENERAL (A&E), KARNATAKA, BANGAL
P.B. No. 5329, PARK HOUSE ROAD, BANGALORE - 560 001.

GE XI/BKP/2019-20/ 319 03.06.2019

2439
13/6/19

To

The Director,
Department of Technical Education,
Begaluru – 560001.

Sir

2704
CISA
13/6/19

**Sub: Regulation Pay and allowances to Lecturers under Technical Education Department as per B K Pavitra and Others Vs Union of India.**

**Ref: 1. DPAR 186 SRS 2018 fy.15.05.2019.**
**2. DPAR 186 SRS 2018 DT.05.03.2019.**
**3. ED 098 TPE 2018 DT.01.03.2019.**

* * *

With reference to the subject cited above, I am to state that, in accordance with the subject cited above as per B K Pavitra and others, to adhere to the GO quoted at reference (1) action may be taken to forward the Service Registers of all the officers who were reverted and reposted to the cadres held by them immediately prior to their reversion, to this office, duly recording their Seniority, assignment of dates of eligibility along with service particulars as to the pay they were drawing, with increments if any released, suspension, EXOL/LWA, Dies non and PTR period ,if any, leave particulars with leave balance till their reporting to duty as gazette officers including LPC.

Action may be taken to furnish the details early. Till such details are received, to minimize hardship to the officers, Adhoc payslip will be issued as per the pay drawn by them immediately prior to their reversion .

Yours faithfully,

J. Srinivasan

Sr. Accounbts Officer.